ಬಟ್ಟೆ ಬರೆಯನ್ನು ತೆಗೆದು ತೊಟ್ಟುಕೊಂಡು ಬಂದಿರುವ ಸ್ಥಾಯಿಚಿತ್ರದ ಮಕ್ಕಳಾದಿಯಾಗಿನ ಒಂದಿಷ್ಟು ಜನರು, ಪಾಪ ಪರಿಹಾರದ ಆಮಿಷವೊಡ್ಡಿ ಹೊಟ್ಟೆ ಪಾಡಿಗೋಸುಗವೇ ದುಡ್ಡು ದೋಚುವ ಮಂದಿ, ತಮ್ಮವರನ್ನು ಕಳೆದುಕೊಂಡು ಭಾರವಾಗಿರುವ ಜನ... ಇವರ ಮಧ್ಯೆ ಒಂಟಿಯಾಗಿ ಕಾಕನನ್ನು ಹುಡುಕಿ ಹೊರಡುತ್ತೇನೆನ್ನುವ ಪಾತಿಚಿಕ್ಕಿಗೆ ಕಾಕನ ಅವಶ್ಯಕತೆ ಈಗಿದ್ದಿದ್ದು ನಿಜವೇ?

'ಚಿಕ್ಕಿ, ಯಾಕೆ ಹೀಗೆ ಹಟ ಹಿಡಿದು ಕುಂತಿದ್ದೀ? ಕಾಕನಿಗೆ ಬರುವ ಮನಸ್ಸಿದ್ದಿದ್ದರೆ ದುಡ್ಡುಕೊಡುವ ನೆಪವೊಡ್ಡಿ ಅವನೂ ಬರುತ್ತಿದ್ದ... ಪತ್ರದಲ್ಲಿ ಒಮ್ಮೆಯಾದರೂ ಹೇಗಿದ್ದಿ ಎಂದು ವಿಚಾರಿಸುತ್ತಿದ್ದ. ಅವನಿಗಿಲ್ಲದ ಆಸ್ಥೆ ಈಗೇಕೆ ನಿನಗೆ? ಹಟ ಮಾಡಬೇಡ ಚಿಕ್ಕಿ' ಎಂದು ಪರಿಪರಿಯಲ್ಲಿ ಅಂಗಲಾಚಿದೆ. 'ನಿನ್ನ ಸ್ವಾಭಿಮಾನ ನಿನ್ನದು ಮಾತ್ರವಲ್ಲ, ನನ್ನ ಜೀವನವನ್ನೂ ಬಲಿಪಡೆಯಿತು ಎಂದು ಹೇಳಲಿಕ್ಕಾದರೂ ಒಮ್ಮೆ ನಾನು ಸಾಯುವುದರೊಳಗೆ ನಿನ್ನ ಕಾಕಾನನ್ನು ಭೇಟಿಯಾಗಲೇಬೇಕು ಕಮಲಿ. ನಂತರ ಜೀವವಿರುವವರೆಗೂ ಹರಿಯ ಸೇವೆಮಾಡಿಕೊಂಡಿರುತ್ತೇನೆ. ನನ್ನ ನಿರ್ಧಾರದಲ್ಲಿ ಬದಲಾವಣೆಯಿಲ್ಲ, ನನ್ನನ್ನು ತಡೆದು ಪ್ರಯೋಜನವೂ ಇಲ್ಲ. ನಿಜವಾಗಲೂ ನನಗೆ ಸಹಾಯಮಾಡಲೇಬೇಕೆಂದಿದ್ದರೆ ನನ್ನ ತೋಟದಿಂದ ಬರುವ ಉತ್ಪನ್ನದ ಲಾಭಾಂಶವನ್ನು ಯಾವುದಾದರೂ ಅನಾಥಾಲಯಕ್ಕೆ ಕೊಡುತ್ತಿರು' ಎಂದು ಕಾಕನ ಟ್ರಂಕನ್ನು ಹಿಡಿದು ಮನೆಯಿಂದ ಹೊರನಡೆದೇಬಿಟ್ಟಳು. ನನಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಇಂತಹ ಗಳಿಗೆಯನ್ನೆದುರಿಸಲು ನಾನು ಸಿದ್ಧವಾಗಿ ಬಂದಿರಲಿಲ್ಲ.

ಹೊರಡಲೇಬೇಕೆಂದಿದ್ದರೆ ನಾನೂ ನಿನ್ನೊಟ್ಟಿಗೆ ಬರುತ್ತೇನೆ, ಇಬ್ಬರೂ ಕಾಕಾನನ್ನು ಹುಡುಕೋಣ, ಮಾತನಾಡಿಸಿಕೊಂಡು ಬರೋಣವೆಂದು ಪಟ್ಟು ಹಿಡಿದೆ. ಪಾತಿಚಿಕ್ಕಿ ಸುತಾರಾಂ ಒಪ್ಪಲಿಲ್ಲ. 'ನನ್ನ ಖಾಸಗಿ ವಿಷಯ, ನನ್ನದೇ ನಿರ್ಧಾರ' ಎಂದು ಎಂದಿನಂತೆ ಖಡಕ್ಕಾಗಿಯೇ ಹೇಳಿದಳು.

ಅಡುಗೆ ಮನೆಯಲ್ಲಿ ಕುದಿಯುತ್ತಿದ್ದ ಕಬ್ಬಿನಹಾಲನ್ನು ಕಳೆ ಸವರಲು ಬಂದ ಚೆನ್ನಪ್ಪನಿಗೆ ಕೊಟ್ಟು ಚಿಕ್ಕಿಯ ಚೀಲವನ್ನು ಹೆಗಲಿಗೇರಿಸಿಕೊಂಡು ಮನೆಯ ಹೆಬ್ಬಾಗಿಲನ್ನು ಗೇಟನ್ನು ಭದ್ರಪಡಿಸಿ ಮನೆಯ ಚಾವಿಯನ್ನು ನನ್ನ ಚೀಲಕ್ಕೆ ತುರುಕಿ ಕಾರ್ ಡ್ರೈವರ್ ಬಾಬುವಿಗೆ ಹುಬ್ಬಳ್ಳಿಗೆ ಹೊರಡೆಂದೆ. ವಾರಾಣಸಿಗೆ ರೈಲು ಹತ್ತುವುದು ಅಲ್ಲಿಂದಲೇ.

ಆಚೆ ಬರಲು ಅವಸರಪಡುತ್ತಿದ್ದ ಕಣ್ಣೀರನ್ನು ತಡೆಯುವುದು ಸಾಧ್ಯವಿಲ್ಲವೆನ್ನಿಸಿ ಅದರಪಾಡಿಗದನ್ನು ಬಿಟ್ಟುಬಿಟ್ಟೆ, ಏನಾದರೂ ಮಾಡಿಕೋ ಎಂದು.

ಕಾರಿನ ಕಿಡಕಿಯಿಂದ ಮನೆಯತ್ತ ಒಮ್ಮೆ ತಿರುಗಿ ನಿಟ್ಟುಸಿರು ತೆಗೆದಳು ಪಾತಿಚಿಕ್ಕಿ, ಋಣವೆಂಬ ಭಾರ ಕಳೆಯಿತೆಂಬಂತೆ! ಮಂಚಿಕೇರಿಯ ಜನರ ಕಷ್ಟಕ್ಕಾಗುವ ದೇವತೆ ಯಾರಿಗೂ ಸೂಟು ಕೊಡದೆ ವಾರಾಣಸಿಗೆ ಹೊರಟಿದ್ದಳು. ತಿರುಗಿ ಬರುವ ಯಾವ ಸೂಚನೆಯೂ ಅವಳ ಮುಖದಲ್ಲಿ ಕಾಣಿಸುತ್ತಿರಲಿಲ್ಲ.

## ಛಾಯಾ ಭಟ್

ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಕತೆ, ಲೇಖನಗಳು ಕನ್ನಡದ ದೈನಿಕ ಹಾಗೂ ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನವರು.